**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560 001**

**ಸಂಖ್ಯೆಎಂಸಿ4ಮಸಂಶಾಘೋ12/2008-09** **ದಿನಾಂಕ20/01/2010**

**ಜ್ಞಾಪನಾ**

ವಿಷಯ:-ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

--000--

**ಪ್ರಸ್ತಾವನೆ :-**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ20/01/2010ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿತು.

**ಆದೇಶ :-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | **ಬೆಥನಿ ವಿದ್ಯಾ ಸಂಸ್ಥೆ, ಮಂಗಳೂರು, ಬೆಥನಿ ಕಾನ್ವೆಂಟ್, ಬೆಂದೂರು, ಕಂಕನಾಡಿ-ಅಂಚೆ, ಮಂಗಳೂರು-575002** | **ಕ್ರಿಶ್ಚಿಯನ್** | **ಸೇಂಟ್ ಮೇರಿಸ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಅರಸೀಕೆರೆ-ಹಾಸನ ಜಿಲ್ಲೆ-573103** |
| 2 | **ದ ಎಜುಕೇಶನಲ್ ಸೊಸೈಟಿ, ಆಫ್ ದ ಸಿಸ್ಟರ್ಸ್ ಆಫ್ ಕ್ಲೂನಿ, ಪ್ರೀತಿ ಸದನ, ಕ್ಲೂನಿ ಪ್ರೊವಿನ್ಷಿಯಲೇಟ್, ಕಣ್ಣೂರು ಅಂಚೆ, ಬಾಗಲೂರು ವಯ ಬೆಂಗಳೂರು -562149** | **ಕ್ರಿಶ್ಚಿಯನ್** | **ಗುಡ್ ಶಫರ್ಡ್ ಕಾನ್ವೆಂಟ್ ಶಾಲೆ, ಅಮ್ಮತ್ತಿ, ವಿರಾಜಪೇಟೆ ತಾ.. ಕೊಡಗು ಜಿಲ್ಲೆ** |

| | | | |
|---|---|---|---|
| 3 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು-575002. | ಕ್ರಿಶ್ಚಿಯನ್ | ಸೇಂಟ್ ಮೇರಿಸ್ ಪ್ರೌಢಶಾಲೆ, ಅಲ್ಫೋನ್ಸ್ ನಗರ, ಚನ್ನರಾಯ ಪಟ್ಟಣ-ತಾ.. ಹಾಸನ ಜಿಲ್ಲೆ |
| 4 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು-575002. | ಕ್ರಿಶ್ಚಿಯನ್ | ಸೇಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆ, ಅಲ್ಫೋನ್ಸ್ ನಗರ, ಚನ್ನರಾಯ ಪಟ್ಟಣ-ತಾ.. ಹಾಸನ ಜಿಲ್ಲೆ |
| 5 | ಆರಾಧನಾ ಸೋಷಿಯಲ್ ಸರ್ವೀಸ್ ಸೊಸೈಟಿ, ರಿಪ್ಪನ್ ಪೇಟೆ, ಶಿವಮೊಗ್ಗ | ಕ್ರಿಶ್ಚಿಯನ್ | ನವಜ್ಯೋತಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಕೋಲಿಗೆ, ಕೋಣಂದೂರು-577422, ತೀರ್ಥಹಳ್ಳಿ ತಾ.. |
| 6 | ಅರಾಫಾ ಎಜುಕೇಶನಲ್ ಅಂಡ್ ಚಾರಿಟಬಲ್ ಟ್ರಸ್ಟ್, ಉಪ್ಪಿನಂಗಡಿ, ದಕ್ಷಿಣ ಕನ್ನಡ-574241 | ಮುಸ್ಲಿಂ | ಅರಾಫಾ ವಿದ್ಯಾ ಕೇಂದ್ರ ಪ್ರೌಢಶಾಲೆ, ಎನ್.ಹೆಚ್.48, ಉಪ್ಪಿನಂಗಡಿ, ಪುತ್ತೂರು ತಾ.. ದಕ್ಷಿಣ ಕನ್ನಡ-574241 |
| 7 | ಅರಾಫಾ ಎಜುಕೇಶನಲ್ ಅಂಡ್ ಚಾರಿಟಬಲ್ ಟ್ರಸ್ಟ್, ಉಪ್ಪಿನಂಗಡಿ, ದಕ್ಷಿಣ ಕನ್ನಡ-574241 | ಮುಸ್ಲಿಂ | ಅರಾಫಾ ಪ್ರಾಥಮಿಕ ಶಾಲೆ, ಎನ್.ಹೆಚ್.48, ಉಪ್ಪಿನಂಗಡಿ, ಪುತ್ತೂರು ತಾ.. ದಕ್ಷಿಣ ಕನ್ನಡ-574241 |
| 8 | ದ ಮೈಸೂರು ಡಯಾಸಿಸನ್ ಎಜುಕೇಶನ್ ಸೊಸೈಟಿ, ಮೈಸೂರು, | ಕ್ರಿಶ್ಚಿಯನ್ | ಸಂತ ಅಗಸ್ತೀನರ ಹಿರಿಯ ಪ್ರಾಥಮಿಕ ಶಾಲೆ, ಪಾಸ್ಕಲ್ ನಗರ, ಜಾಗೇರಿ ಅಂಚೆ, ಸತ್ತೆಗಾಲ, ಕೊಳ್ಳೆಗಾಲ ತಾ... |
| 9 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು-575002. | ಕ್ರಿಶ್ಚಿಯನ್ | ನವಚೇತನ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಚನ್ನಗಿರಿ, ದಾವಣಗೆರೆ ಜಿಲ್ಲೆ |
| 10 | ದಿ ತೆರೆಸಿಯನ್ ಕಾರ್ಮೆಲ್ ಎಜುಕೇಶನ್ ಸೊಸೈಟಿ, ನಿರ್ಮಲ ಪ್ರೌಢಶಾಲೆ, ವಿ.ವಿ.ಮಹಲ್ ಮೈಸೂರು | ಕ್ರಿಶ್ಚಿಯನ್ | ಓ.ಎಲ್.ವಿ.ಕಾನ್ವೆಂಟ್ ಪ್ರಾಥಮಿಕಶಾಲೆ, ಹಾನಗಲ್ಲು, ಸೋಮವಾರಪೇಟೆ ತಾ.. ಕೊಡಗು ಜಿಲ್ಲೆ |
| 11 | ಮಾಸ್ಟರ್ ಪ್ಲಾನ್ ಮೈನಾರಿಟಿ ಎಜುಕೇಶನ್ ಟ್ರಸ್ಟ್, ಮುರ, ಕಬಕ, ಪುತ್ತೂರು, ದ.ಕ. ಜಿಲ್ಲೆ | ಮುಸ್ಲಿಂ | ಎಂ.ಪಿ.ಎಂ.ಪ್ರೌಢಶಾಲೆ, ಮುರ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ |
| 12 | ಸಂತ ಥಾಮಸ್ ಶಿಕ್ಷಣ ಸಂಸ್ಥೆ, ಕಾರ್ಮೆಲ್ ಭವನ, ಎನ್.ಆರ್.ಮೊಹಲ್ಲಾ, ಮೈಸೂರು | ಕ್ರಿಶ್ಚಿಯನ್ | ಭಾರತ ಮಾತಾ ಪ್ರೌಢಶಾಲೆ, ಕೊಪ್ಪ, ಪಿರಿಯಾಪಟ್ಟಣ ತಾ.. |
| 13 | ಜೈನ್ ಎಜುಕೇಶನ್ ಸೊಸೈಟಿ, ನಂ.17,ಬಿ, 5ನೇಮೇನ್, 8ನೇಕ್ರಾಸ್, ಶ್ರೀರಾಂಪುರ, ಮೈಸೂರು | ಜೈನರು | ಮಹಾವೀರ ವಿದ್ಯಾ ಮಂದಿರ ಪ್ರೌಢಶಾಲೆ, ಶ್ರೀರಾಂಪುರ, ಮೈಸೂರು |
| 14 | ಜೈನ್ ಎಜುಕೇಶನ್ ಸೊಸೈಟಿ, ನಂ.17,ಬಿ, 5ನೇಮೇನ್, 8ನೇಕ್ರಾಸ್, ಶ್ರೀರಾಂಪುರ, ಮೈಸೂರು | ಜೈನರು | ಮಹಾವೀರ ವಿದ್ಯಾ ಮಂದಿರ ಪ್ರಾಥಮಿಕ ಶಾಲೆ, ಶ್ರೀರಾಂಪುರ, ಮೈಸೂರು |

| | | | |
|---|---|---|---|
| 15 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು-575002. | ಕ್ರಿಶ್ಚಿಯನ್ | ಹೋಲಿ ರೆಡೀಮರ್ ಹಿರಿಯ ಪ್ರಾಥಮಿಕ ಶಾಲೆ, ಹೊಸನಗರ, ಶಿವಮೊಗ್ಗ ಜಿಲ್ಲೆ |
| 16 | ಮಾತೃಶ್ರೀ ಎಜುಕೇಶನ್ ಸೊಸೈಟಿ, ನಂ.57, 7ನೇಅಡ್ಡರಸ್ತೆ, ಶ್ರೀಭುವನೇಶ್ವರಿನಗರ, ಕೆಂಪಾಪುರ, ಕಾಫಿಬೋರ್ಡ್ ಲೇಔಟ್, ಬೆಂಗಳೂರು-560024 | ಕ್ರಿಶ್ಚಿಯನ್ | ಕೆನ್ನೆತ್ ಜಾರ್ಜ್ ಆಂಗ್ಲ ಶಾಲೆ (1ರಿಂದ10ನೇ ತರಗತಿ), ಶ್ರೀಭುವನೇಶ್ವರಿನಗರ, ಕೆಂಪಾಪುರ, ಕಾಫಿಬೋರ್ಡ್ ಲೇಔಟ್, ಬೆಂಗಳೂರು-560024 |
| 17 | ದ ಮೈಸೂರು ಡಯಾಸಿಸನ್ ಎಜುಕೇಶನ್ ಸೊಸೈಟಿ, ಜಯಲಕ್ಷ್ಮೀಪುರಂ, ಮೈಸೂರು, | ಕ್ರಿಶ್ಚಿಯನ್ | ಸೇಂಟ್ ಆಂಟೋನೀಸ್ ಏಡೆಡ್ ಹಿರಿಯ ಪ್ರಾಥಮಿಕ ಶಾಲೆ, ಸಂದನ ಪಾಳ್ಯ, ಕೊಳ್ಳೆಗಾಲ ತಾ.. |

ಷರತ್ತುಗಳು

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.
2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.
3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.
4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.
5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.
5) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಯನ್ನು

1)ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2)ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಿಕ್ಷಣ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ

3)ಉಪನಿರ್ದೇಶಕರು, (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ, ಮಡಿಕೇರಿ, ಶಿವಮೊಗ್ಗ, ದಕ್ಷಿಣಕನ್ನಡ, ಚಾಮರಾಜನಗರ, ದಾವಣಗೆರೆ, ಮೈಸೂರುಮತ್ತು ಬೆಂಗಳೂರು ಉತ್ತರ ಜಿಲ್ಲೆ ಇವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4)ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅರಸೀಕೆರೆ, ಹೊಸನಗರ,ಸೋಮವಾರಪೇಟೆ, ಹನೂರುವಲಯ–ಕೊಳ್ಳೆಗಾಲ ತಾ.., ಬೆಂಗಳೂರು ಉತ್ತರವಲಯ–4 ಯಲಹಂಕ, ಮತ್ತೂರು, ದಕ್ಷಿಣವಲಯ–ಮೈಸೂರು, ಪಿರಿಯಾಪಟ್ಟಣ, ಚನ್ನಗಿರಿ, ಕೊಳ್ಳೆಗಾಲ, ತೀರ್ಥಹಳ್ಳಿ, ಚನ್ನರಾಯಪಟ್ಟಣ, ವಿರಾಜಪೇಟೆ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

5)ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

6)ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

7)ಕಛೇರಿ ಪ್ರತಿ